





(6ನೇ ಪುಟದಿಂದ)

ಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ 'ಮೂಡಲ ಮನೆಯ ಮುತ್ತಿನ ನೀರಿನ ಎರಕವ ಹೊಯ್ದು.. ನುಣ್ಣನೆ ಎರಕವ ಹೊಯ್ದು.. ಬಾಗಿಲ ತೆರೆದು ಬೆಳಕು ಹರಿದು ಜಗವೆಲ್ಲ ತೊಯ್ದು...' ಎಂಬ ಕವನದ ಸಾಲುಗಳು ಮತ್ತೆ ಮತ್ತೆ ನೆನಪಾದವು. ಕುಂದಾದ್ರಿಯ ಗುಡ್ಡದ ಮೇಲಿನ ಗಿಡ ಗಂಟೆಗಳು ತಣ್ಣನೆಯ ಗಾಳಿಗೆ ಕಿಲ ಕಿಲ ನಗುವ ಇಬ್ಬನಿಯ ಹನಿ ಹನಿಯನ್ನು ಪೋಣಿಸಿದಂತಿತ್ತು. ಕಮದಲ ಹೂವು ಅರಳಿದ ಸಣ್ಣ ಕೊಳಗಳು, ಮಂಜಿನ ಮುಸುಕಿನಲ್ಲಿ ಶ್ವೇತಾಂಬರನಂತೆ ಕಂಗೊಳಿಸುತ್ತಿದ್ದ ಜೈನ ಬಸದಿ, ಕ್ಷಣ ಕ್ಷಣಕ್ಕೂ ಬದಲಾಗುತ್ತಿದ್ದ ನಿಸರ್ಗ ನಿರ್ಮಿತ ಬಾನ ಚಿತ್ತಾರ..!

ನನ್ನ ಮನದಾಳದಲ್ಲಿ ಕುಂದಾದ್ರಿಯ ಆ ಪ್ರವಾಸ ಇವತ್ತಿಗೂ ಅಚ್ಚೊತ್ತಿದಂತಿದೆ. ಅದೊಂದು ಮರೆಯಲಾಗದ ಅವಿಸ್ಮರಣೀಯ ಅನುಭವ. ಇಲ್ಲಿ ಸೆರೆ ಹಿಡಿದದ್ದು ಅದರ ಕೆಲವು ತುಣುಕುಗಳಷ್ಟೇ!